ದೀದಾರನಿಗೆ ತಾಕೀದು ಮಾಡತಕ್ಕದ್ದು. ಆ ಪ್ರಕಾರ ಆತನೇ ಆಗಲಿ ಆತನಿಂದ ಕ್ರಮವಾಗಿ ಅಧಿಕಾರ ಪಡೆದ ಆತನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟ್ ಆಫಿಸರವರು ಅಥವಾ ತೂಗಿಸುವ ಬಗ್ಗೆ ನಿಯಮಿಸಲ್ಪಟ್ಟ ಇತರ ಆಫಿಸರು ತಮಿಗೆ ಅನುಕೂಲ ವಾದಾಗ್ಗೆ ಲಾಟುಗಳನ್ನ ತೂಗಿಸಿ ಮುದ್ರೆಹಾಕಿ ವೊಪರು ಮಾಡತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲವು. ಮರಗಳು ತೂಕ ಮಾಡುವ ಬಗ್ಗೆ ತಗಲುವ ಲಾಗುವಡು ಸರಕಾರದವರಿಂದೇ ವಹಿಸಲ್ಪಡುವದು. ಆದರೆ ಕೋಶಿಯಿಂದ ಮರವನ್ನು ಪೂರ್ತಿಯಾಗಿ ಸಾಗಿಸಿಕೊಂಡು ಹೋಗಲಿಕ್ಕೆ ಅವಶ್ಯಕವಾದ ತಮಾಂ ಲಾಗುವಡೂ ಖರೀದೀದಾರನಿಂದಲೇ ವಹಿಸಲ್ಪಡತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಗೆ ಖಾಯಿಷ್ ಮಾಡಿ ಆಬಾ ಧಿತ ಪೂರಾ ಮೊಬಲಗನ್ನು ಪಾವತಿ ಮಾಡಿದರೆ ಅಂಥಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟ್ ಆಫಿಸರರು ತೂಕ ಮಾಡಿಕೊಡುವದಕ್ಕೆ ಯಾವ ಅಡ್ಡಿಯೂ ಯಿರುವದಿಲ್ಲವು.

7. ಪೂರಾ ಮೊಬಲಗು ಪಾವತಿಮಾಡಿ ಮತ್ತು ಫಾರೆಸ್ಟ್ ಆಫಿಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡೆಯುವವರಿಗೂ ಯಾವ ಖರೀದೀದಾರನಿಂದಲಾಗಲಿ ಮರಗಳು ಸಾಗಿಸಲ್ಪಡಕೂಡದು.

IV. ಕೋಶೀಬಾಡಿಗೆ.

8. ಮೇಲಿನ ಸೆಕ್ಷನ್‌ಗಳನುಸರಿಸಿ ತೂಕ ಮಾಡಲ್ಪಟ್ಟು ಫೂಪಾ ಹಾಕಲ್ಪಟ್ಟು ಮತ್ತು ಮೊಬಲಗು ಪಾವತಿ ಮಾಡಲ್ಪಟ್ಟ ಮರಗಳು ಹರಾಜು ತಾರೀಖು ಲಾಗಾಯತು ತೊಂಭತ್ತು ದಿವಸಗಳೊಳಗೆ ಯಾವ ಕಾಲದಲ್ಲಾಗಲಿ ಕೋಶೀ ಬಾಡಿಗೆ ಯಿಲ್ಲದೆಯೇ ಸಾಗಿಸಲ್ಪಡಬಹುದು, ಅಂಥಾ ಮರಗಳು ಹರಾಜು ತಾರೀಖು ಲಾಗಾಯತು ತೊಂಭತು ದಿನಗಳಿಗೆ ಜಾಸ್ತಿಯಾಗಿ ಕೋಶಿಯಲ್ಲಿ ಇಡಲ್ಪಟ್ಟರೆ ಅವುಗಳಿಗಾಗಿ ಹರಾಜು ತಾರೀಖು ಲಾಗಾಯತು ಅವು ಉತ್ತಮ ತರಹೇವಾಗಿದ್ದ ಪಕ್ಷದಲ್ಲಿ ಖಂಡಿ ವಂದಕ್ಕೆ 4 ಆಣೆ ದರ ಪ್ರಕಾರವಾಗಲಿ ಅಥವಾ ತಿಂಗಳು ವಂದಕ್ಕೆ ರ್ಟ ಖಂದಕ್ಕೆ ಖಂದು ರೂಪಾಯಿ ಪ್ರಕಾರವಾಗಲಿ ಮತ್ತು ಅವು ಕೀಳು ತರಹಾವುಗಳಂದರೆ ವಿಲ್ವಾ—ಜಿಲ್ಲಾ ಮತ್ತು ಬಿಳಿ ಮರಗಳಾಗಿದ್ದರೆ ಅಂಥಾವಕ್ಕೆ ಖಂಡಿಗೆ 2 ಆಣೆ ದರ ಪ್ರಕಾರ ಅಥವಾ ರ್ಟ ವಂದಕ್ಕೆ 8 ಆಣೆಗಳ ಮೇರೆ ಕೋಶೀ ಬಾಡಿಗೆ ವಸೂಲ್ಮಾಡಲ್ಪಡತಕ್ಕದ್ದು. ಸದರೀ ಮರವು ಹರಾಜು ತಾರೀಖು ಲಾಗಾಯತು 6 ತಿಂಗಳೊಳಗಾಗಿ ಸಾಗಿಸಲ್ಪಡದಿದ್ದರೆ ಖರೀದಿದಾರನಿಗೆ 10 ದಿನಗಳು ವಾಯಿದೇ ನೋಟಿಸು ಕೊಟ್ಟವನಂತರ ಪೂರಾ ಮೊಬಲಗನ್ನು ತಕ್ಷಣವೇ ಪಾವತಿಮಾಡಿ ಕೂಡ್ಲೆ ಸಾಗಿಸುವ ಷರತ್ತಿನ ಮೇಲೆ ಹರಾಜನ್ನು ಸರಿಯಾಗಿ ಬಹಿರಂಗಪಡಿಸಿದ ನಂತರ ಬಾಡಿಗೇ ವ ಖರ್ಚುಗಳ ವಸೂಲಿಬಗ್ಯಾಗಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹರಾಜು ಹಣದ ಪೈಕಿ ಯೇನಾದರೂ ವುಳಿಯುವ ಮೊಬಲಗನ್ನ ಅವ್ವಲ್ ಕ್ರಯದಾರನಿಗೆ ಪಾವತಿ ಮಾಡಲ್ಪಡತಕ್ಕದ್ದು. ಅಂಥಾ ಹರಾಜು ಆಖೈರಾಗುವದರ ವಳಗಾಗಿ ಅವ್ವಲ್ ಕ್ರಯದಾರನು ಸಲ್ಲತಕ್ಕ ಬಾಡಿಗೆ ವ ಖರ್ಚು ಮೊಬಲಗನ್ನು ಹಾಜರ್ ಮಾಡಿದರೆ ಆತನು ತನ್ನ ಮರವನ್ನ ಸಾಗಿಸಿಕೊಂಡು ಹೋಗಲು ಅಪ್ಪಣೆ ಕೊಡಲ್ಪಡತಕ್ಕದ್ದು. ಇನ್ಸ್‌ಪೆಕ್ಟರ್ ಜನರಲ್‌ಯವರು ಯಾವ ಸಂದರ್ಭದಲ್ಲಿಯಾದರೂ ತಕ್ಕ ಕಾರಣಗಳು ತೋರಿಸಲ್ಪಟ್ಟ ಪಕ್ಷದಲ್ಲಿ ಮೂರು ತಿಂಗಳ ಬಾಡಿಗೆಗೆ ಜಾಸ್ತಿಯಾಗದ ಬಂದು ಭಾಗದ ಬಾಡಿಗೆ ಮೊಬಲಗನ್ನು ಮಾಫ್ ಮಾಡಬಹುದು.

V. ಸಾಗಿಸುವ ಬಗ್ಗೆ ಲೈಸೆನ್ಸ್.

9. ಫಾರೆಸ್ಟ್ ಇಚಾರ್ಜ್ ಆಫಿಸರಿಂದ ದಸ್ಕತ್ ಆದ ("ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್") ಪಡಿಯುವ ಪರಿಯಂತ ಕೋಶಿಯಿಂದ ಯಾವ ಮರವೂ ಸಾಗಿಸಲ್ಪಡಕೂಡದು. ಅಂಥಾ ಲೈಸೆನ್ಸ್ ಪಡೆದ ತಮಾಂ ಜನಗಳೂ ಅಂಥಾ ಲೈಸೆನ್ಸ್‌ಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವರ್ತಕನಾಗಲಿ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸಿನ ಷರತ್ತುಗಳನ್ನು ಮೀರಿ ನಡೆದರೆ ಅಥವಾ ಗೊತ್ತಾದ ವಾಯಿದೆ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸು ಮಾಡದಿದ್ದರೆ ಅಂಥಾ ಮನುಷ್ಯನು ಮೈಸೂರು ಫಾರೆಸ್ಟ್ ರೂಲ್ಸ್ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ಅಮಲ್ ಚಲಾಯಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು. ವಾಯಿದೆ ಪೂರೈಸಿದ ತಮಾಂ ಲೈಸೆನ್ಸ್‌ಗಳೂ ವುಪಯೋಗವಿಲ್ಲದ್ದಾಗಿ ರದ್ದಾದವೆಂದು ಭಾವಿಸಲ್ಪಡತಕ್ಕದ್ದು. ಜಾಸ್ತಿ ವಾಯಿದೆಯು, ಜರೂರಿಯಾತ್ ಕಾರಣಗಳ ಮೇಲೆಯೂ ಮತ್ತು ಡೆಪ್ಯುಟಿ ಕಮ್ಮಿಷನರ ಹುಕುಂ ಅನುಸರಿಸಿಯೂ ಕೊಡಲ್ಪಡತಕ್ಕದ್ದು.

VI. ಒಟ್ಟು ವಿಷಯ.

10. ಜಾರೀಕಿರತಕ್ಕ ನಿಬಂಧನೆಗಳನುಸರಿಸಿ ಮೈಸೂರ ಕೀವೆಯ ಸರಹದ್ದುಗಳೊಳಗೆ ಯಾವ ಸಂದಲ್ ಮರವೂ ಖುಷ್‌ಬಾಷ್ ಜನಗಳಿಂದ ಮಾರಲ್ಪಡಕೂಡದು, ಅಥವಾ ರೇಜ್ ಇಚಾರ್ಜ್ ಫಾರೆಸ್ಟ್ ಆಫಿಸರಿಂದ ಕೊಡಲ್ಪಡತಕ್ಕ ಲೈಸೆನ್ಸ್ ಇಲ್ಲದೆ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡಕೂಡದು.

11. ಡೆಪ್ಯುಟಿ ಕಮ್ಮಿಷನರೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಆಫಿಸರೇ ಆಗಲಿ ಇವರ ಮುಂಜಾಗ್ರತಿನಿಶಿ ಹಾಗೆ ಇವರು ಹಾಜರ್ ಇಲ್ಲದ ಪಕ್ಷದಲ್ಲಿ ಇಚಾರ್ಜ್ ಫಾರೆಸ್ಟ್ ಆಫಿಸರು ತಮ್ಮ ಸ್ವಂತ ಜವಾಬ್ದಾರಿ ಮೇಲೆ ಖರೀದಿಗೆ ತೆಗದುಕೊಳ್ಳಲು ಇಚ್ಛೈಸುವ ಜನಗಳಿಗೆ ಯಾವ ಕಾಲದಲ್ಲೇ ಆಗಲಿ ಯಾವ ಕಾರಣವೂ ತಿಳಿಸದೇನೇ ಹರಾಜನ್ನು ನಿಲ್ಲಿಸಲಿಕ್ಕೆ ಯಜ್ಞಾಧಿಕಾರಿ ವುಂಟುಗಿರತಕ್ಕದ್ದು.

ಸಿ. ಅಪ್ಪಯ್ಯ,
ಫಾರ್ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.
ಇ ಸ್ತಿ ಹಾ ರ್.

ತಾರೀಖು 23ನೇ ನವಂಬರ್ 1896.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ. ಕಬ್ಬನ್ ಸಾಹೇಬರ ಪ್ಯಾಟೆಗೆ ಕೀರಿದ ಗುಂಮಟದಲ್ಲಿದ್ದು ಜೇವಾರ್ಸ್ ತರೀಕ ಮೃತಪಟ್ಟ ಸುಲ್ತಾನಮ್ಮನೆಂಬವಳ ಬಾಬತು ಐರ್ಜ ಗುಮ್ಮಟದ 5ನೇ ನಂಬರ್ ಗಲ್ಲಿಯಲ್ಲಿರುವ ಮ್ಯುನಿಸಿಪಲ್ ನಂಬರ್ 3, 4, 5, 6, 7, 8 ಮತ್ತು ಲಂಗಡಾ ಹುರ್ಸೆಸಾಬಿ ಗಲ್ಲಿಯಲ್ಲಿ ಇರುವ ನಂಬರ್ 4 ಈ ನಂಬರ್‌ಗಳುಳ್ಳ ಮನೆಗಳನ್ನು ಐರ್ಜ ಮನೆಗಳ ಬಗ್ಗೆಯಲ್ಲಿ ಬೆಂಗಳೂರು ತಾಲ್ಲೂಕು ಅಮಲ್‌ದಾರ್ ರೂಬರೂ ಸ್ಯ ಮಜಕೂರು ಡಿಸೆಂಬರ್ ಮಾಹೆ 14ನೇ ತಾರೀಖು ದಿವಿ 11 ಘಂಟೆಗೆ ಹರಾಜ್ ಮಾಡಲ್ಪಡುತ್ತೆವಾಗಿ ಆ ಕಾಲಕ್ಕೆ ಸರಿಯಾಗಿ ಖಾಯಿಷ್ಮಾಡತಕ್ಕವರು ಹಾಜರಾಗಿ ಛಡಸವಾಲ್ಮಾಡಿ ತೆಗದುಕೊಳ್ಳಬಹುದು. ಆ ರೀತಿ ತೆಗದುಕೊಂಡವನು ಹರಾಜ್ ಖೈದಾದ ಕೂಡ್ಲೆ ಕೇಕಡಾ 25 ರೂಪಾಯಿಗಳ ಮೇರಿಗೆ ಡಿಪಾಜಿಟ್ ಹಾಜರ್ಮಾಡಬೇಕು. ತರುವಾಯ 15 ದಿವಸಗಳೊಳಗಾಗಿ ಪೂರಾ ಮೊಬಲಗು ಹಾಜರ್ಮಾಡಬೇಕು. ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರಿಂದ ಹರಾಜ್ ಮುಂಜಾರಾಗಿ ಬಂದ ಬಳಿಕ ಮನೆಗಳು ಹರಾಜಿನಲ್ಲಿ ಪಡದವರ ಸುಪರ್ದು ಮಾಡಲಾದೀತು.

ಮೇಲೆ ನಮೂದಿಸಿರುವ ಡಿಪಾಜಿಟ್ ಮತ್ತು ಪೂರಾ ಮೊಬಲಗು ಹಾಜರ್ಮಾಡದೆ ತಪ್ಪಿದಲ್ಲಿ ಪುನಹಾ ಹರಾಜ್ ಮಾಡಲ್ಪಡುತ್ತೆ. ಲುಕ್ಸಾನ್ ಆದಲ್ಲಿ ಕಮ್ಮಿ ಬೀಳುವ ಮೊಬಲಗ್ಯೆ ಮೊದಲನೇ ಛಡಸವಾಲ್‌ದಾರನನ್ನು ಗುರಿಪಡಿಸಲ್ಪಡುತ್ತೆ.

ಎಂ. ಅಂಣಾಜರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.